ರೊ. ಡಾ. ಕೆ. ಸಿ. ಮರಿಯಪ್ಪ
M.A., P.hD., B.Ed., Dip- in-Folk
ವಿಶ್ರಾಂತ ಪ್ರಾಂಶುಪಾಲರು

'ಕಾಮಧೇನು'
ಎಸ್.ಎಲ್.ಎನ್. ದೇವಸ್ಥಾನದ ರಸ್ತೆ,
ಹೊಳೆನರಸೀಪುರ-573 211.
ಮೊ : 99001 56400

೦5ನೇ ಅಕ್ಟೋಬರ್ 2010

ಸನ್ಮಾನ್ಯ ಪದ್ಮಶ್ರೀ ಡಾ.ಸಿ.ಎನ್. ಮಂಜುನಾಥ್ ಅವರಿಗೆ ನನ್ನ ಅನಂತ ನಮನಗಳು.

ನಿಮ್ಮ ಬಗೆಗೆ ಪರಿಚಯಾತ್ಮಕವಾದ ಲೇಖನಗಳನ್ನು ಕರ್ಮವೀರ (26.09.10) ಪತ್ರಿಕೆಯಲ್ಲಿ ಓದಿ ಅಮಿತವಾದ ಆನಂದವಾಯ್ತು. ಚನ್ನರಾಯಪಟ್ಟಣ ತಾಲ್ಲೂಕಿನ ಗ್ರಾಮೀಣ ಪ್ರದೇಶದಿಂದ ಬಂದು ವೈದ್ಯಕೀಯ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಗೈದಿರುವ ನಿಮ್ಮ ಪರಿಶ್ರಮಕ್ಕೆ ವಂದನೆಗಳು. ನಿಮ್ಮ ಜಾಣ್ಮೆ, ಶಿಸ್ತಿನ ಜೀವನ, ಸೇವಾತತ್ವರತೆ ಅನುಕರಣೀಯ. ಒಬ್ಬ ವಿಜ್ಞಾನಿಯ ಮಗ ವಿಜ್ಞಾನಿ ಆಗೊದ್ರಲ್ಲಿ ಅತಿಶಯೋಕ್ತಿ ಆಗಲಾರದು. ಆದರೆ ಒಬ್ಬ ಸಾಧಾರಣ ರೈತನ ಮಗ ವಿಜ್ಞಾನಿ ಆದರೆ, ವೈದ್ಯನಾದರೆ ಅದು ಅತಿಶಯೋಕ್ತಿಯ ಸಾದನೆಯಾಗುತ್ತದೆ. ನಿಮ್ಮ ಪರಿಶ್ರಮದ ಸಾಧನೆ ನಿಜಕ್ಕೂ ಅನುಪಮ ಹಾಗೂ ಅವಿಸ್ಮರಣೀಯವಾದುದು.

ಎಲ್ಲಾ ಕ್ಷೇತ್ರಗಳಗಿಂತಲೂ ವೈದ್ಯ ಕ್ಷೇತ್ರ ಬಹಳ ಪವಿತ್ರ ಹಾಗೂ ಗುರುತರವಾದುದು. ಒಂದು ದೃಷ್ಠಿಯಲ್ಲಿ ವೈದ್ಯವೃತ್ತಿ ವಿಶ್ರಾಂತಿರಹಿತವಾದುದು. ತುರ್ತು ಸಂದರ್ಭ ಬಂದರೆ ಹಗಲಿರುಳು ಊಟ ವಿಶ್ರಾಂತಿ ಬಿಟ್ಟು ರೋಗಿಯನ್ನು ಬದುಕಿಸಬೇಕಾಗುತ್ತೆ. ನಿಮ್ಮ ಎರಡನೆಯ ಲೇಖನ "ಡಾಕ್ಟರೊಂದಿಗೆ ಒಂದು ದಿನ" ಓದಿದಾಗ ನಿಮ್ಮ ಆದರ್ಶಪ್ರಾಯವಾದ ದಿನಚರಿ ವಿಶ್ರಾಂತಿರಹಿತ ವೈದ್ಯ ವೃತ್ತಿಗೆ ದ್ಯೋತಕವಾಗಿದೆ. ಭಗವಾನ್ ಬುದ್ಧ ಹೇಳಿರುವಂತೆ "ನೂರು ಉಪದೇಶಗಳಗಿಂತಲೂ ಆಪತ್ಕಾಲದಲ್ಲಿ ಮಾಡಿದ ಒಂದು ಸಹಾಯ ಅತ್ಯಂತ ಶ್ರೇಷ್ಠವಾಗಿರುತ್ತದೆ." ಈ ಮಾತು ನಿಮ್ಮನ್ನು ಕುರಿತು ಹೇಳದಂತಿದೆ.

ನಿಮ್ಮದು ಅಪರೂಪದ ವ್ಯಕ್ತಿತ್ವ, ಏಕೆಂದರೆ ಜಗದಲ್ಲಿ ಎಲ್ಲಿ ನೋಡಿದರೂ ಧನದಾಹಿಗಳೇ ಹೆಚ್ಚು. ಇಂತಹ ಪರಿಸರದಲ್ಲೂ ಉಚಿತವಾಗಿ ಚಿಕಿತ್ಸೆ ನೀಡಿ ಕೆಲವು ಸಂದರ್ಭಗಳಲ್ಲಿ ರೋಗಿ ಮತ್ತು ಸಂಗಡಿಗರಿಗೆ ಪ್ರಯಾಣದ ಖರ್ಚನ್ನು ಭರಿಸುತ್ತಿದ್ದೀರಿ ಎಂದರೆ ವಾಹ್ ನಂಬಲೂ ಅಸಾಧ್ಯವಾದರೂ ಖಂಡಿತ ಸತ್ಯದ ಸಂಗತಿ. ದೇವರು ಇದ್ದಾನೋ ಇಲ್ಲವೋ ಅದು ಬೇರೆ ಮಾತು. ನಿಮ್ಮಿಂದ ಸಹಾಯ ಪಡೆದವರ ದೃಷ್ಠಿಯಲ್ಲಿ ನೀವು ಮಾತ್ರ ದೈವಸ್ವರೂಪರಾಗಿ ಕಾಣುತ್ತೀರಿ. ಅನುಭವಿಗಳು ಹೇಳಿರುವ ಮಾತು ಎಂದಿಗೂ ಸತ್ಯ. "ವೈದ್ಯಹರಿ ನಾರಾಯಣೊ ನಮಃ"

ಹೃದ್ರೋಗ ಶ್ರೀಮಂತ ಖಾಯಿಲೆ, ಶ್ರೀಮಂತರಿಗೆ ಮಾತ್ರ ಬರುತ್ತದೆ, ಅದರ ಚಿಕಿತ್ಸಾ ವೆಚ್ಚವೂ ಕೂಡ ತುಂಬಾ ದುಬಾರಿ ಎಂಬ ಕಾಲವೊಂದಿತ್ತು, ಆದರೆ ಈಗ ಕಾಲ ಬದಲಾಗಿದೆ. ನಮ್ಮ ಜೀವನ ಕ್ರಮ, ಆಹಾರ ಪದ್ಧತಿ, ಕೆಲಸದ ಒತ್ತಡ, ಹಾಗೂ ದುಶ್ಚಟಗಳಿಂದಾಗಿ ಬಡವರಿಗೂ ಈ ಶ್ರೀಮಂತ ಕಾಯಿಲೆ ವ್ಯಾಪಿಸಿದೆ. ನಿಮ್ಮಂತಹವರ ಮಾನವೀಯ ಗುಣಗಳಿಂದಾಗಿ ಬಡವರಿಗೂ ಎಟುಕುವ ಚಿಕಿತ್ಸಾ ವೆಚ್ಚದಲ್ಲಿ ಚಿಕಿತ್ಸೆ ನೀಡಿ "ಬಡವರ ಬಂಧು" ಎನಿಸಿಕೊಂಡಿದ್ದೀರಿ. ಇದೊಂದು ಅನುಕರಣೀಯ ಗುಣ ವಿಶೇಷವಾಗಿದೆ.

ಮಣ್ಣಿನ ಮಗ ಕರ್ನಾಟಕ ಕಂಡ ಪ್ರಥಮ ಪ್ರಧಾನಿಯವರ ಅಳಿಯಂದಿರು, ರಾಜಕೀಯ ಪ್ರಭಾವ ಎಷ್ಟೇ ಇದ್ದರೂ ಅದನ್ನೆಲ್ಲಾ ತುಚ್ಛವಾಗಿ ಧಿಕ್ಕರಿಸಿ, ಸ್ವಂತ ಸಾಮರ್ಥ್ಯದಿಂದ ಬೆಳೆದು ಬಂದಿದ್ದೀರಿ. ಸರಳರಲ್ಲಿ ಅತಿ ಸರಳರಾಗಿ ಜೀವನ ನಡೆಸುತ್ತಿರುವ ನೀವು ನಿಮ್ಮ ವೃತ್ತಿಬಾಂಧವರಿಗೆಲ್ಲಾ ಆದರ್ಶಪ್ರಾಯರಾಗಿದ್ದೀರಿ. ಈ ಅಪರೂಪದ ಗುಣವನ್ನು ಎಲ್ಲರೂ ಮೈಗೂಡಿಸಿಕೊಳ್ಳಲು ಸಾಧ್ಯವಿಲ್ಲ. ಈ ಸದ್ಗುಣ ಪ್ರಾಪ್ತಿಯಿಂದಾಗಿ ಸತ್ಕೀರ್ತಿಗೆ ಪಾತ್ರರಾಗಿರುತ್ತೀರಿ ಎಂದು ಭಾವಿಸುತ್ತೇನೆ. ಅಹಂ ಇಲ್ಲದೆ ಸರಳ ಸಜ್ಜನಿಕೆಯ ಸಾಕಾರಮೂರ್ತಿ ಎನಿಸಿಕೊಂಡಿದ್ದೀರಿ. ಇದೊಂದು ಅನುಕರಣೀಯ ಗುಣ ವಿಶೇಷವಾಗಿದೆ.

ಚಾಣಕ್ಯ ಸಂಹಿತೆಯಲ್ಲಿ ಹೇಳಿರುವಂತೆ "ಯಾರ ಪುತ್ರನು ವಿನಯಶೀಲನಾಗಿರುವನೋ, ಪತ್ನಿಯು ವಿಶ್ವಾಸ ಭರಿತಳಾಗಿರುತ್ತಾಳೋ, ಯಾರು ತಮ್ಮ ಹತ್ತಿರ ಇರುವಷ್ಟು ಹಣದಲ್ಲಿಯೇ ಸಂತೃಪ್ತನಾಗಿರುವರೋ ಅಂಥವರಿಗೆ ಈ ಭೂಮಿ ಸ್ವರ್ಗ ಸಮಾನಾಗಿರುತ್ತದೆ." ಈ ರೀತಿಯ ಸಂಬಂಧ ಲಕ್ಷದಲ್ಲಿ ಒಬ್ಬರಿಗೆ ಲಭ್ಯವಾಗಬಹುದೇನೋ, "ಸಂತೋಷ ಜೀವನ ಎಂಬುದು ಮನಸ್ಸಿನ ಸ್ಥಿತಿಯಾಗುತ್ತದೆ" "Happiness is the state of mind" – ನಿಮ್ಮಂತಹ ಸರಳ ಜೀವನ ನಡೆಸುತ್ತಿರುವ ಸಾಕಾರ ಮೂರ್ತಿಗಳನ್ನು ನೋಡಿಯೆ ಬಹುಷಃ ಚಾಣಾಕ್ಯ ಈ ರೀತಿ ಹೇಳಿರಬಹುದೇನೋ?

ಈ ನಾಡಿನ ಅದೆಷ್ಟೋ ಮನೆ–ಮನಗಳನ್ನು ಬೆಳಗಿರುವ ಮಹಾಬೆಳಕು ನೀವು ಎಂಬ ಕೀರ್ತಿಗೆ ಪಾತ್ರರಾಗಿದ್ದೀರಿ. ಈ ಕೀರ್ತಿ ಹಾಸನ ಜಿಲ್ಲೆಗೆ ಮಾತ್ರವಲ್ಲ ಇಡೀ ನಾಡಿಗೆ ಹೆಮ್ಮೆಯ ವಿಚಾರ. ನಿಮ್ಮಿಂದ ಚಿಕಿತ್ಸೆ ಪಡೆದು ಗುಣಹೊಂದಿರುವ ಕನ್ನಡದ ಪ್ರಸಿದ್ಧ ಹಾಗೂ ಹಿರಿಯ ಸಾಹಿತಿ ಸಾ.ಶಿ.ಮರುಳಯ್ಯನವರು ಹೇಳಿರುವಂತೆ "ಶ್ರೇಷ್ಟ ಹೃದಯರೋಗ ತಜ್ಞರು ಮಾತ್ರವಲ್ಲ, ಅಷ್ಟೆ ಪ್ರಮಾಣದ ಹೃದಯ ಶ್ರೀಮಂತಿಕೆಯ ಮಹಾಮಾನವರು ಎಂದಿದ್ದಾರೆ ಇದು ಅತಿಶಯೋಕ್ತಿ ಮಾತಲ್ಲ. ಕಿರಿಯ ವಯಸ್ಸಿನಲ್ಲೆ ಹಿರಿಯ ಸಾಧನೆ ಮಾಡಿ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿರುತ್ತೀರಿ. ಪರಿಚಯವಿರಲಿ ಇಲ್ಲದಿರಲಿ ಮನುಷ್ಯರನ್ನು ಮನುಷ್ಯರನ್ನಾಗಿ ನೋಡಿ, ನುಡಿಸಿ–ನಡೆಸಿ ನೆರವಾಗುವ ಹಿರಿತನ ನಿಮಗೆ ಬಳುವಳಿಯಾಗಿ ಬಂದಿರುವ ಗುಣವಾಗಿದೆ.

ಭಗವಂತನು ನಿಮಗೂ ನಿಮ್ಮ ಕುಟುಂಬ ವರ್ಗದವರಿಗೂ ಆಯುರಾರೋಗ್ಯ ಸಕಲ ಸನ್ಮಂಗಲಗಳನ್ನು ಕರುಣಿಸಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಧನ್ಯವಾದಗಳೊಡನೆ,

ಅಭಿಮಾನಪೂರ್ವಕವಾಗಿ,

ಇವರಿಗೆ:

ಪದ್ಮಶ್ರೀ ಡಾ.ಸಿ.ಎನ್.ಮಂಜುನಾಥ್,
ನಿರ್ದೇಶಕರು,
ಜಯದೇವ ಹೃದ್ರೋಗ ಆಸ್ಪತ್ರೆ,
ಬೆಂಗಳೂರು.